## ಸುದ್ದಿಸಂಚಯ

### ರಾಮಕೃಷ್ಣ ದರ್ಶನದ ಬಿಡುಗಡೆ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಜುಲೈ ೬. ೨೦೦೮ ರಂದು ಸಂಜೆ ೫ ಗಂಟೆಗೆ ನಡೆದ ಸಮಾರಂಭದಲ್ಲಿ **'ರಾಮಕೃಷ್ಣ ದರ್ಶನ'** ಎಂಬ ಹೆಸರಿನ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳನ್ನು ಬಿಂಬಿಸುವ ಚಿತ್ರಫಲಕಗಳನ್ನು ಬಿಡುಗಡೆ ಮಾಡಲಾಯಿತು. ಸುಮಾರು ೫೦೦ ಭಕ್ತರು, ಹಿತೈಷಿಗಳು ನೆರೆದಿದ್ದ ಭವ್ಯ ಸಮಾರಂಭದಲ್ಲಿ ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಅವರು ಚಿತ್ರಫಲಕಗಳ ಸಂಪುಟವನ್ನು ಬಿಡುಗಡೆ ಮಾಡಿದರು. ಅವರು ಈ ಸಂದರ್ಭದಲ್ಲಿ ಮಾತನಾಡುತ್ತ "ಶ್ರೀರಾಮಕೃಷ್ಣರು ತಮ್ಮನ್ನು ಆನಂದದ ಪಾರಿವಾಳ ಎಂದು ಕರೆದುಕೊಳ್ಳುತ್ತಿದ್ದರು. ಆಧ್ಯಾತ್ಮಿಕ ಮೂರ್ತಿಯಾದ ಅವರು ಆನಂದಮೂರ್ತಿಯೂ ಹೌದು. ಆಕರ್ಷಣೀಯ ಮೂರ್ತಿಯೂ ಹೌದು. ಆಧ್ಯಾತ್ಮಿಕತೆಯಿಂದಲೇ ನಿಜವಾದ ಆನಂದ ದೊರಕಲು ಸಾಧ್ಯ. ಅವರ ಜೀವನ ಸಂದೇಶಗಳ ಪ್ರದರ್ಶನಗಳು ನಡೆಯುವ ಎಲ್ಲ ತಾಣಗಳಲ್ಲಿಯೂ ನಿತ್ಯೋತ್ಸವವಾಗುವುದು. ಸಾಮಾನ್ಯಜನರಿಗೆ ಶ್ರೀರಾಮಕೃಷ್ಣರ ಸಂದೇಶ ಮುಟ್ಟಿಸುವ ಈ ಕಾರ್ಯ ಪ್ರಶಂಸನೀಯ" ಎಂದರು. ಇದೇ ಸಂದರ್ಭದಲ್ಲಿ ಆಶ್ರಮದಿಂದ ಪ್ರಕಟವಾಗಿರುವ ಕೆಲವು ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಜಿ. ಕುಮಾರ್ ನಾಯಕ್ ಅವರು, "ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ಮಾಡುವ ಶಿಕ್ಷಕರು, ಗುರುಗಳಂತಿರಬೇಕು. ಅದಕ್ಕಾಗಿ ಅವರಿಗೆ ಮೌಲ್ಯಗಳ ಪರಿಚಯ ಬೇಕು. ಅವುಗಳ ಅರಿವನ್ನು ರಾಮಕೃಷ್ಣ ಆಶ್ರಮವು ಮೂಡಿಸುತ್ತಿದೆ. ಶ್ರೀರಾಮಕೃಷ್ಣರ ಸಂದೇಶಗಳು, ಸಂವಿಧಾನದ ಆಶೋತ್ತರಗಳಿಗೆ ಸಮಾನವಾಗಿವೆ. ಇವುಗಳ ಪ್ರಸಾರ ಕಾರ್ಯದಲ್ಲಿ ಶಿಕ್ಷಣ ಇಲಾಖೆ ಆಶ್ರಮಕ್ಕೆ ಸಹಾಯಹಸ್ತ ನೀಡಲು ಸಿದ್ಧ" ಎಂದರು. ಅಧ್ಯಕ್ಷತೆ ವಹಿಸಿದ್ದ, ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜಿ ಅವರು, "ದೃಶ್ಯ ಮಾಧ್ಯಮವು ಅತ್ಯಂತ ಪರಿಣಾಮಕಾರಿಯಾದುದು. ಅದರ ಮೂಲಕ ಶ್ರೀರಾಮಕೃಷ್ಣರ ಜೀವನ ಸಂದೇಶಗಳ ಪ್ರಚಾರದ ಈ ಕಾರ್ಯ ಶ್ಲಾಘನೀಯವಾದುದು" ಎಂದರು.



ಎಡದಿಂದ, ಸ್ವಾಮಿ ಗೌತಮಾನಂದಜಿ, ಸ್ವಾಮಿ ಸುರೇಶಾನಂದಜಿ, ಶ್ರೀ ಜಿ. ಕುಮಾರ್ ನಾಯಕ್

ಕಡೆಯಲ್ಲಿ ರಾಮಕೃಷ್ಣ ದರ್ಶನದ ಚಿತ್ರಫಲಕಗಳನ್ನೊಳಗೊಂಡ ಆಕರ್ಷಕ ಸಿ.ಡಿ. ಪ್ರದರ್ಶನ ನಡೆಯಿತು. ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜಿ ಅವರು ಸ್ವಾಗತಿಸಿದರು. ಸ್ವಾಮಿ ಪರಹಿತಾನಂದಜಿ ಅವರು ವರದಿ ಓದಿದರು; ಬ್ರ. ಅದ್ವೈತ ಚೈತನ್ಯ ಅವರು ಬಿಡುಗಡೆಯಾದ ಪುಸ್ತಕಗಳ ಪರಿಚಯ ಮಾಡಿ ಕೊಟ್ಟರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ವಂದನಾರ್ಪಣೆ ಮಾಡಿದರು.

ಶ್ರೀರಾಮಕೃಷ್ಣರ ಜೀವನ-ಸಂದೇಶಗಳನ್ನು ಬಿಂಬಿಸಿರುವ, ವರ್ಣರಂಜಿತ ಆಕರ್ಷಕ ೪೦ ಪೋಸ್ಟರ್‌ಗಳನ್ನು ಒಂದು ಕಿಟ್ ಹೊಂದಿರುತ್ತದೆ. ಅಂತಹ ಸುಮಾರು ೫೦೦ ಕಿಟ್‌ಗಳನ್ನು ಭಾರತದಾದ್ಯಂತ ವಿತರಿಸಲಾಗುವುದು. ಎರಡು ಭಾಷೆಗಳಲ್ಲಿ ಇರುವ ಈ ಚಿತ್ರಫಲಕಗಳಲ್ಲಿ ಇಂಗ್ಲೀಷಿನ ಜೊತೆಗೆ ಕನ್ನಡ, ಬೆಂಗಾಲಿ, ತಮಿಳು, ತೆಲುಗು, ಮಲಯಾಳಮ್, ಹಿಂದಿ, ಮರಾಠಿ, ಗುಜರಾತಿ, ಒರಿಯಾ ಹಾಗೂ ಅಸ್ಸಾಮಿಗಳಲ್ಲಿ ಶ್ರೀರಾಮಕೃಷ್ಣರ ಜೀವನವಿಚಾರ ಮತ್ತು ಸಂದೇಶಗಳು ಆಕರ್ಷಕ ಚಿತ್ರಗಳೊಂದಿಗೆ ಮುದ್ರಿತವಾಗಿವೆ.

### ಬಳ್ಳಾರಿಯಲ್ಲಿ ನೂತನ ವಿದ್ಯಾರ್ಥಿ ಮಂದಿರದ ಉದ್ಘಾಟನೆ

ಶ್ರೀರಾಮಕೃಷ್ಣ-ವಿವೇಕಾನಂದ ಕೇಂದ್ರ, ಬಳ್ಳಾರಿ ಇದರ ವತಿಯಿಂದ ಆರಂಭಿಸಿರುವ ಶ್ರೀರಾಮಕೃಷ್ಣ ವಿದ್ಯಾರ್ಥಿನಿಲಯದ ಉದ್ಘಾಟನಾ ಸಮಾರಂಭವು ದಿನಾಂಕ ೧೫.೦೬.೨೦೦೮, ಭಾನುವಾರದಂದು ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ, ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜಿ ಅವರು ಈ ವಿದ್ಯಾರ್ಥಿ ನಿಲಯದಲ್ಲಿ ವಾಸಮಾಡುವ ವಿದ್ಯಾರ್ಥಿಗಳು ದೇಶದ ಒಟ್ಟು ಏಳಿಗೆಗೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡುತ್ತಾರೆ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಭಾಗವಹಿಸಿದ್ದ ಶಾಸಕರಾದ ಶ್ರೀ ಸೋಮಶೇಖರ ರೆಡ್ಡಿ ಅವರು, ಈ ಆಶ್ರಮದ ಪರಿಸರದಲ್ಲಿ ಒಂದು ಅಲೌಕಿಕ ಶಕ್ತಿ ಇದೆ; ಈ ಸಂಸ್ಥೆಗೆ ತಮ್ಮ ಕೈಲಾದಷ್ಟು ಸಹಾಯ ಮಾಡುವುದಾಗಿ ಹೇಳಿದರು. ಅನಂತರ ಮಾತನಾಡಿದ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಈ ವಿದ್ಯಾರ್ಥಿ ನಿಲಯದ ಪ್ರಾಮುಖ್ಯತೆಯನ್ನು ವಿವರಿಸಿ, ಸಹಾಯಕ್ಕೆ ಮುಂದೆ ಬಂದ ಶಾಸಕರನ್ನು ಅಭಿನಂದಿಸಿದರು.

ಈ ವಿದ್ಯಾರ್ಥಿನಿಲಯದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ವಸತಿಯ ಸೌಲಭ್ಯದ ಜೊತೆಗೆ, ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಯೋಗ, ಪ್ರಾರ್ಥನೆ ಮತ್ತು ಧ್ಯಾನಗಳಿಗೂ ಒತ್ತು ನೀಡಲಾಗುವುದು. ಪ್ರತಿಭಾವಂತ ಗ್ರಾಮೀಣ ವಿದ್ಯಾರ್ಥಿಗಳಿಗೆ ಆದ್ಯತೆ ಕೊಡಲಾಗುವುದು.

Managing Editor : ***Swami Nityasthananda*** Editor : ***Swami Vireshananda***

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.